ಶ್ರೀ ಬಿ. ಎಚ್. ಬೋರಣ್ಣಗೌಡರು.—7 ವರ್ಷ ದಿಂದಲೂ ವ್ಯವಸಾಯದ ಇಲಾಖೆಯಲ್ಲೇ ಇದ್ದರೇ ಅಥವಾ ಬೇರೆ ಕಡೆ ಎಲ್ಲಾದರೂ ಇದ್ದರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇರೆ ಎಲ್ಲೂ ಇರಲಿಲ್ಲ. ಅಲ್ಲೇ ಇದ್ದರು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅಲ್ಲ ಅವರು ಯಾವ ಹುದ್ದೆಯಲ್ಲಿದ್ದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Plant breeding Work and Plant Genetics, ನೋಡಿಕೊಳ್ಳುತ್ತಿದ್ದರು.

ಶ್ರೀ ಬಿ. ಎಚ್. ಬೋರಣ್ಣಗೌಡರು.—10 ಜನ ಪ್ರೊಬೇಷನರುಗಳನ್ನು ತೆಗೆದುಕೊಂಡಮೇಲೆ ಇವರಿಗೆ ಇಷ್ಟೆರೆಕ್ಟಾಗಿ ಪ್ರೊಮೋಷ್ ಕೊಡಲಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮೊದಲೇ ಪ್ರೊಮೋಷ್ ಕೊಡಲಾಗಿತ್ತು. ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾದದ್ದು ಈಚೆಗೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅವರನ್ನು ಈಗ ಬೇರೆ ಕಡೆಗೆ ಕಳುಹಿಸುವುದಕ್ಕೆ ಏರ್ಪಾಡಾಗಿದೆಯೇ ?

**The Hon'ble Sri T. MARIAPPA.**—It is proposed to depute him to Delhi, in connection with plant breeding work and plant genetics.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈಗ ಪ್ರೊಬೇಷನರುಗಳನ್ನು ತೆಗೆದುಕೊಂಡಿದ್ದೀರಿ. ಅವರಿಗೆ ಪ್ರೊಮೋಷ್ ಕೊಡುವಾಗ ಅಥವಾ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಯಾವುದಾದರೂ ಒಂದು ಪ್ರಮಾಣ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇದೆ.

ಶ್ರೀ ಬಿ. ಹುಚ್ಚೇಗೌಡರು.—ಆ ಪ್ರಮಾಣ ಏನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗ್ರಾಜ್ಯುಯೇಟ್ ಮತ್ತು ನಾನ್‌ಗ್ರಾಜ್ಯುಯೇಟುಗಳನ್ನು 1:3 ಪ್ರಮಾಣದಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ನನ್ನ ಪ್ರಶ್ನೆ ಸೀನಿಯರ್ ಗ್ರೇಡ್‌ನಲ್ಲಿ 27 ಜನ ಇದ್ದಾರೆ. ಅಲ್ಲಿ ಭರ್ತಿ ಮಾಡುವಾಗ, ಇಲಾಖೆಯಲ್ಲಿ ಸೀನಿಯರ್ ಆಗಿರುವವರಿಗೂ, ಡೈರೆಕ್ಟ್ ಆಗಿ ರಿಕ್ರೂಟ್ ಮಾಡಿಕೊಳ್ಳುವವರಿಗೂ ಯಾವುದಾದರೂ ಒಂದು ಪ್ರಮಾಣ ಇದೆಯೇ ಎಂದು !

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಅಗ್ರಿಕಲ್ಚರಲ್ ಇಷ್ಟೆಕ್ಟರುಗಳನ್ನು ಡೈರೆಕ್ಟ್ ಆಗಿ ರಿಕ್ರೂಟ್ ಮಾಡುತ್ತೇವೆ. ಅಗ್ರಿಕಲ್ಚರಲ್ ಕಾಲೇಜಿನಿಂದ ಪಾಸ್ ಮಾಡಿಕೊಂಡು ಬಂದವರಿಗೆ ಹೆಚ್ಚು ಅವಕಾಶ ಕೊಡಬೇಕೆಂದು ಸೀನಿಯರ್ ಅಗ್ರಿಕಲ್ಚರಲ್ ಇಷ್ಟೆಕ್ಟರ್‌ರ ಸ್ಥಾನಕ್ಕೆ ಗ್ರಾಜ್ಯುಯೇಟುಗಳನ್ನು ರಿಕ್ರೂಟ್‌ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಅವರನ್ನು ಯಾವ ಪ್ರಮಾಣದ ಮೇಲೆ ತೆಗೆದುಕೊಳ್ಳುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟೇ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂಬುದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈಗ ಎಷ್ಟು ಜನ ಪ್ರೊಬೇಷನರುಗಳನ್ನು ತೆಗೆದುಕೊಂಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರ ಕೊಟ್ಟಿದ್ದೇನೆ. 10 ಜನ.

ಶ್ರೀ ಬಿ. ಹುಚ್ಚೇಗೌಡರು.—ಇನ್ನೂ ತೆಗೆದುಕೊಳ್ಳಬೇಕಾದ್ದು ಖಾಲಿ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಾಲಿ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಮುಂದೆ ಖಾಲಿ ಬಿದ್ದಾಗ ಈಗ ಇಲಾಖೆಯಲ್ಲಿರುವವರಿಗೇ ಪ್ರೊಮೋಷ್ ಕೊಡಲು ಯೋಚನೆ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಯೋಚನೆ ಮಾಡುತ್ತೇವೆ. ದಕ್ಷರಾಗಿರುವವರನ್ನು ತೆಗೆದುಕೊಳ್ಳಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ನಾಯ್ಡುರವರ ಕ್ವಾಲಿಫಿಕೇಷ್ B.Sc., (Hons.) ಎಂದು ತಿಳಿಸಿದ್ದೀರಿ. ಅವರು ಅಗ್ರಿಕಲ್ಚರಲ್ ಡಿಗ್ರಿ ಏನಾದರೂ ತೆಗೆದುಕೊಂಡಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಬಾಟನಿ ಗ್ರಾಜ್ಯುಯೇಟ್ ಆಗಿ, Cotton breeding, seed multiplication ನಲ್ಲಿ ತರಬೇತಾಗಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಗ ಹೊಸದಾಗಿ ತೆಗೆದುಕೊಂಡಿರುವವರ ಪೈಕಿ ಅಗ್ರಿಕಲ್ಚರ್‌ನಲ್ಲಿ ಸ್ಪೆಷಲೈಸೇಷ್ ಮಾಡಿಕೊಂಡಿರುವವರು ಯಾರೂ ಇಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಕೆಲವರು ಬಾಟನಿ ಗ್ರಾಜ್ಯುಯೇಟುಗಳಾಗಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ನಾಯ್ಡು ಎಂಬುವರು ಇಲಾಖೆಯ ಲಾರಿಯನ್ನು ತೆಗೆದುಕೊಂಡು ಷೂಟಿಂಗ್‌ಗೆ ಹೋಗುತ್ತಿದ್ದರೇ ಎಂಬುದಾಗಿ ಒಂದು ಪ್ರಶ್ನೆ ಬಂದಿತ್ತು. ಅವರೇ, ಇವರು ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಾರಿ ತೆಗೆದುಕೊಂಡು ಹೋಗುತ್ತಾ ಇದ್ದರು ಎಂಬುದನ್ನು ಒಪ್ಪಿಕೊಂಡಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಏನೇ ಆಗಲಿ ಆ ವಿಷಯವಾಗಿ ಒಂದು ಪ್ರಶ್ನೆ ಬಂದಿತ್ತು. ಇವರೇ ಅಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇವರ ಮೇಲೆ ಯಾವುದಾದರೂ ಅಪಾದನೆಗಳಿದ್ದು, Anti Corruption Officerರವರ ಪರಿಶೀಲನೆಯಲ್ಲಿದೆಯೇ ?

ಮಾನ್ಯ ಶ್ರೀ ಟಿ, ಮರಿಯಪ್ಪನವರು.—ನೋಟೀಸ್.

---

## Navalur Feeder Project.

*Q.—134. **Sri H. M. CHANNABASAPPA** (Mysore District—General).—

Will the Government be pleased to state :—

(*a*) whether the investigation of Navalur Feeder Project is over, and estimate sanctioned ; if so, the estimate and when they propose to push through the work ;

(*b*) the series of tanks and the *atchkats* thereof that derive benefit out of this project ?

*A.*—**The Hon'ble Sri T. MARIAPPA** (Home Minister).—

(*a*) (1) Yes, for Rs. 1,56,000.

(2) No.

(3) If the project is feasible and the estimate is sanctioned.

(*b*) It is possible to divert 120 units of water to the Alanahalli tank valley. By this water supply could be given to a few tanks situated at the upper reaches of the Valley.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಫೀಡರ್ ಛಾನಲ್ ವಿಷಯ ಯಾವ ಸ್ಟೇಜಿನಲ್ಲಿದೆ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎಸ್ಟಿಮೇಟ್ ತಯಾರಾಗಿದೆ. ಈಗ ಅದನ್ನು scrutinize ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆಲನಹಳ್ಳಿ ಕೆರೆಯ Valley ಗೆ ಹೀಗೆ ನೀರೊದಗಿಸುವುದರಿಂದ ಅದರ Series ನಲ್ಲಿರುವ ಎಷ್ಟು ಎಕರೆ ಜಮೀನುಗಳಿಗೆ ನೀರಿನ ಭರವಸೆ ಬರುತ್ತದೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 120 ಯೂನಿಟ್ಟುಗಳು ಇದರಿಂದ ಬರಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದನ್ನು ಇಲ್ಲೇ ಹೇಳಿದ್ದೀರಿ. ನಾನು ಕೇಳುವುದು ಈ ಆಲನಹಳ್ಳಿ ಕೆರೆ Series ಗೆ ಹೀಗೆ 120 ಯೂನಿಟ್ಟುಗಳನ್ನು ಸರಬರಾಯಿ ಮಾಡುವುದರಿಂದ ಆ Series ನಲ್ಲಿರುವ ನಾನಾ ಕೆರೆಗಳಲ್ಲಿ ಎಷ್ಟು ಅಚ್ಚುಕಟ್ಟಿಗೆ ಉತ್ತಮವಾಗುತ್ತದೆಂದು ಅಂದಾಜುಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 120 ಯೂನಿಟ್ಟುಗಳಿಂದ ಸುಮಾರು ಎಷ್ಟು ಎಕರೆಗಳಿಗೆ ನೀರಿನ ಭರವಸೆ ಕೊಡುವುದಕ್ಕೆ ಸಾಧ್ಯವೋ ಅಷ್ಟಕ್ಕೂ ಕೊಡಬಹುದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ Series ನಲ್ಲಿ ಅನೇಕ ಕೆರೆಗಳ ಕೆಳಗೆ 750 ಎಕರೆಗಳಿಂದ 1,000 ಎಕರೆಗಳವರೆಗೂ ಅಚ್ಚುಕಟ್ಟಿದೆ. ಅವೆಲ್ಲಕ್ಕೂ ಇದರಿಂದ ನೀರಿನ ಭರವಸೆ ದೊರೆಯುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 120 ಯೂನಿಟ್ ನೀರಿನಿಂದ ಎಷ್ಟರಮಟ್ಟಿಗೆ ಭರವಸೆ ಕೊಡಲು ಸಾಧ್ಯವೋ ಅಷ್ಟರಮಟ್ಟಿಗೂ ಭರವಸೆ ಕೊಡುತ್ತೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅನೇಕ ವರ್ಷಗಳಿಂದ ಈ ಕೆರೆಗಳ ಕೆಳಗೆ ಫಸಲು ಸಮರ್ಪಕವಾಗಿ ಆಗುತ್ತಿಲ್ಲವೆಂದೂ, ನೀರಿನ ಭರವಸೆಯಿಲ್ಲದೆ ಸರಿಯಾಗಿ ಹೈರಾಣುಮಾಡುವುದಕ್ಕಾಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆದ್ದರಿಂದ ಈ ಅಂದಾಜನ್ನು ಅಡಮ್ಟು ಜಾಗ್ರತೆ ಮಂಜೂರುಮಾಡಬೇಕೆಂಬುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಪರ್ಯಾಲೋಚನೆಮಾಡಬೇಕೆಂದೇ ಇದ್ದೇವೆ. ಇದರ ಬಗ್ಗೆ ಚೀಫ್ ಇಂಜಿನಿಯರ್ ಆಫೀಸರು ಫಿಪರೀತ ದುಬಾರಿ ಖರ್ಚಾಗುತ್ತದೆಂದು ಹೇಳಿದ್ದಾರೆ. ಸುಮಾರು 1,56,000 ರೂಪಾಯಿಗಳಷ್ಟು ಹೆಚ್ಚಿಗೆ ಹಣ ಬೇಕಾಗುತ್ತದೆಂದು ಹೇಳಿದರು. ಆದರೂ ಇದನ್ನು ಪುನಃ ಪರಿಶೀಲನೆಮಾಡಿ ಇನ್ನೂ ಕಡಿಮೆ ಖರ್ಚಿನಲ್ಲಿ ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ಪ್ರಾಜೆಕ್ಟಿನಿಂದ ಉಪಯೋಗ ಹೊಂದಿ ನೀರಿನ ಭರವಸೆ ಹೊಂದುವ ಎಕರೆಯ ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡರೆ ಇದಕ್ಕೆ ಖರ್ಚಾಗುವ ಒಂದು ಲಕ್ಷ 56 ಸಾವಿರ ರೂಪಾಯಿಗಳೂ ಕಡಿಮೆಯೆಂದು ಹೇಳುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಅಚ್ಚುಕಟ್ಟಿನ ಎಲ್ಲಾ ಪ್ರದೇಶವನ್ನೂ ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮೂರು ಕಾಸೂ ಖರ್ಚಿಲ್ಲದೆ ಎಷ್ಟು ಪ್ರದೇಶದಲ್ಲಿ ಬೆಳೆಯಾಗುತ್ತಿತ್ತೋ ಅದನ್ನು ಬಿಟ್ಟು ಬಾಕಿ ಪ್ರದೇಶಕ್ಕೆ ಮಾತ್ರ ಈ ಹೆಚ್ಚಿನ ಖರ್ಚು ಬಿದ್ದಿದೆಯೆಂದು ಭಾವಿಸಬೇಕು. ಆದ್ದರಿಂದ ಈ ಹೆಚ್ಚಿನ ಖರ್ಚಿನಿಂದ ಎಷ್ಟು ಹೆಚ್ಚಿಗೆ ಜಮೀನು ಸಾಗುವಳಿಗೆ ಬರುತ್ತದೆಂಬುದನ್ನು ನೋಡಬೇಕು. ಇದನ್ನೊಂದು ಫೀಡರ್ ಛಾನಲ್ ಎಂದು ತೆಗೆದುಕೊಂಡರೆ, ಇಂಡಿಯಾ ಸರ್ಕಾರದವರು ಅದಕ್ಕೆ ಹಣ ಕೊಡಲು ಎಷ್ಟು ಏಕರೇಜ್ ಹೆಚ್ಚಿಗೆ ಸಾಗುವಳಿಯಾಗುತ್ತದೆಂಬುದನ್ನು ತಿಳಿಸಬೇಕೆಂದು ಅವರು ಒತ್ತಾಯಮಾಡುತ್ತಾರೆ. ಆ ದೃಷ್ಟಿಯಿಂದ ಈ ಪ್ರಾಜೆಕ್ಟನ್ನು ಪುನಃ ಪರೀಕ್ಷೆಮಾಡಿ ನೋಡಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಫೀಡರ್ ಛಾನಲ್‌ನ ಖರ್ಚಿನ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.....

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೇ ಅದನ್ನು ಪುನರ್‌ಪರಿಶೀಲನೆ ಮಾಡುತ್ತಿದ್ದೇವೆ. ಅಲ್ಲೊಂದು ಕಡೆ deep cutting ಬರುತ್ತದೆ. ಪುನಃ ಪರಿಶೀಲನೆ ಮಾಡಿ ಎಷ್ಟರಮಟ್ಟಿಗೆ ಖರ್ಚು ಕಡಿಮೆಮಾಡಬಹುದೆಂದು ನೋಡುತ್ತೇವೆ

ಅಧ್ಯಕ್ಷರು.—165ನೆಯ ಪ್ರಶ್ನೆ. ಈ ಪ್ರಶ್ನೆಯನ್ನು ಕಳುಹಿಸಿದ ಮಾನ್ಯ ಸದಸ್ಯರು ಬಂದಿಲ್ಲ. ಶ್ರೀ ಹುಚ್ಚೇಗೌಡರು ಆ ಪ್ರಶ್ನೆಯನ್ನು ಹಾಕಬಹುದೆಂದು ಹೇಳಿ ಬರೆದುಕಳುಹಿಸಿದ್ದಾರೆ. ಅದರಂತೆ ಈಗ ಮಾನ್ಯ ಹುಚ್ಚೇಗೌಡರು ಉಪಪ್ರಶ್ನೆ ಹಾಕಬಹುದು.

---

## Desilting of Tanks.

*Q.*—165. **Sri B. HUTCHE GOWDA** (Tumkur District—General) [on behalf of **Mushir-ul-Mulk J. MOHAMED IMAM** (Tumkur *cum* Chitaldrug—Muslim).]—

Will the Government be pleased to state :—

(*a*) the number and the names of the tanks that were desilted with the help of bulldozers, taxi-excavators and other mechanical means;

(*b*) the cost of desilting each tank?